
ನೀಡಬಾರದು, ಅವನ ಪ್ರೀತಿ? ಅವರಲ್ಲೊಬ್ಬ ವಯಸ್ಸಾದ ಮಹಿಳೆಯನ್ನು ಅವನು ದೌರ್ಜನ್ಯಕ್ಕೆ ಗುರಿ ಮಾಡಿದ್ದ. ಇದು ಮಾತು ಮತ್ತು ಕೃತಿಗಳ ಕದನವನ್ನು ಕೊನೆಗಾಣಿಸಿತ್ತು. ಈಗ ಏನಿದ್ದರೂ ಮೌನ ಹೋರಾಟ. ಮುಕಾಮಿ ಅವರ ಬಗ್ಗೆ ಕಠಿಣವಾಗಿಯೇ ವರ್ತಿಸುತ್ತಿದ್ದಳು. ಅವರ ಠೀವಿ ಹಾಗೂ ಪ್ರತ್ಯೇಕತೆಯಿಂದ ಇವಳು ದೂರವಿದ್ದಳು, ಇಡೀ ಹಳ್ಳಿಯ ಅನುಕಂಪ ಗಿಟ್ಟಿಸಲು ಪ್ರಯತ್ನ ಮಾಡಿದ್ದಳು. ಆದರೆ, ಅವಳೇಕೆ ಈಗ ಅದನ್ನೆಲ್ಲಾ ತಲೆಕೆಡಿಸಿಕೊಳ್ಳಬೇಕು? ಅವಳ ಕನಸು, ಮಹತ್ವದ ಆಸೆ, ಬದುಕು ಎಲ್ಲವೂ ಈ ಮನುಷ್ಯನಿಂದ ನೆರವೇರಿರಲಿಲ್ಲವೇ?

ಎರಡು, ಮೂರು ಋತುಗಳು: ಇಡೀ ಜಗತ್ತು ಬದಲಾಗುವುದೆಂದು ಅವಳಿಗೆ ಗೊತ್ತಿತ್ತು. ಅವಳಿಗೀಗ ಮಕ್ಕಳು ಇರಲಿಲ್ಲ. ಇಡೀ ಊರಿನ ಜನ ಅವಳ ಮೇಲೆ ತೋರಿಸಿದ ನಿಂದನೆ, ಅಪಮಾನ, ಆರೋಪ ಒಂದೇ, ಎರಡೇ? ಅವಳೀಗ ಸೋಲು ಅನುಭವಿಸಿದ್ದಳು. ಅದು ಅವಳಿಗೆ ಗೊತ್ತಿತ್ತು, ಇತರರಿಗೂ ಅದು ಗೊತ್ತಿತ್ತು. ಅವರು ಬರೀ ಪಿಸುಗುಟ್ಟುತ್ತಾ ನಗುತ್ತಿದ್ದರು. ಓ... ಅವರುಗಳ ನಗುವಿನ ಠೀವಿ ಹಾಗೂ ಒಣ ಜಂಬ ಅವಳನ್ನು ಚುಚ್ಚುತ್ತಿತ್ತು. ಆದರೆ ಅವಳೇನೂ ಭಯಗೊಳ್ಳಬೇಕಾಗಿರಲಿಲ್ಲ. ಅವರೇ ಗೆಲ್ಲಲಿ. ಆದರೆ ಇನ್ನೂ ಅವಳ ಪಾಲಿಗೆ ಪತಿ ಇದ್ದ. ಆಗ ಮತ್ತೆ ಯಾವುದೇ ಮುನ್ಸೂಚನೆ ಇಲ್ಲದೆ, ಆ ಮನುಷ್ಯ ಬದಲಾಗಲು ಆರಂಭಿಸಿದ. ಸ್ವಲ್ಪ ಸಮಯದಲ್ಲಿಯೇ ಅವಳ ಸಹವಾಸ ಹಾಗೂ ಗುಡಿಸಲನ್ನು ಬಿಟ್ಟು ತನ್ನ ಪಾಡಿಗೆ ತಾನು ಬೇರೊಂದು ಮನೆಯಲ್ಲಿ ಇರುತ್ತಿದ್ದ. ಅದರಿಂದ ಅವಳು ಕೋಪಗೊಂಡು, ಅವನನ್ನು ಹುಡುಕಿಕೊಂಡು ಹೋದಳು. ಅವಳ ಹೃದಯ ಅವನಿಗಾಗಿ ಕರಗಿದರೂ, ಅವನನ್ನು ಮಾತ್ರ ಕಾಣಲಾಗಲಿಲ್ಲ.

ಯೋಧ, ರೈತ, ನೃತ್ಯಪಟು ಆದ ಮುಥೋಗ– ಯಾವುದನ್ನು ಅವಳು ತಾತ್ಕಾಲಿಕವಾಗಿ ಮಟ್ಟಹಾಕಿದ್ದಳೋ– ತನ್ನ ಹಳೆಯ ಚಾಳಿಗೇ ಗಂಟುಬಿದ್ದಿದ್ದ. ಅವಳನ್ನು ಹೊಡೆಯಲು ಶುರು ಮಾಡಿದ. ಅವಳು ತನ್ನ ಹಿರಿಯ ಪತ್ನಿಯೊಡನೆ ಜಗಳವಾಡುತ್ತಿದ್ದುದನ್ನು ನೋಡಿದ್ದ. ಅವನಲ್ಲಿ ಶೇಖರವಾಗಿದ್ದ ಆಕ್ರೋಶ, ಹತಾಶೆ ಮತ್ತು ಅಸಹನೆ ಎಲ್ಲವೂ ಅವಳನ್ನು ಹೊಡೆಯುತ್ತಿದ್ದಂತೆ, ಹೊರದಾರಿಯನ್ನು ಕಂಡುಕೊಂಡಿತು. ಆ ಹೊಡೆತ: ಅದನ್ನು ನೋಡಲು ಜನಸಂದಣಿ ಸೇರಿದರೂ, ಸಹಾಯಕ್ಕೆ ಧಾವಿಸಿರಲಿಲ್ಲ. ಅವನು ಯಾವುದೇ ಎಚ್ಚರಿಕೆ ಅಥವಾ ಸಮಜಾಯಿಷಿ ನೀಡದೇ ಅವಳನ್ನು ಎಷ್ಟರಮಟ್ಟಿಗೆ ಹೊಡೆದಿದ್ದನೆಂದರೆ, ಅವಳು ಸತ್ತೇ ಹೋದಳು ಎಂದುಕೊಂಡ. ಅವಳು ಕೂಗಿಕೊಂಡಿರಲಿಲ್ಲ. ತನ್ನ ಸ್ಥಿತಿಯನ್ನು ಒಪ್ಪಿಕೊಂಡಿರಲಿಲ್ಲ. ಅಂತ್ಯ ಸಮೀಪಿಸಿತು ಎಂದು ತಿಳಿದು, ನೆಲದ ಮೇಲೆ ಬಿದ್ದಿದ್ದಾಗ, ತನ್ನಂತೆ ಮತ್ತೆ ಕೆಲವರು ಅದೇ ರೀತಿ ನರಳುತ್ತಿರಬಹುದೆಂದುಕೊಂಡಳು. ಹೌದು! ಅವರೂ ಸಹ ಹೊಡೆತ ತಿಂದು ಕರುಣೆಗಾಗಿ ಕೂಗಿಕೊಳ್ಳುತ್ತಿರಬಹುದೆಂದು ಕೊಂಡಳು. ಆದರೆ, ಇಂತಹ ಹೊಡೆತ ಹಾಗೂ ತಪ್ಪಾದ ನಡವಳಿಕೆ ಅವಳನ್ನು ಕುಗ್ಗಿಸಲಾರದು ಎಂದು ಧೈರ್ಯದಿಂದಲೇ ಅದನ್ನು ಎದುರಿಸಿದಳು. ಅವುಗಳನ್ನು ಗೆಲ್ಲಬೇಕು: ಹಾಗಾಗಿ ಅವಳು ತಕ್ಷಣ ಮನಸ್ಸು ಮಾಡಿದಳು. ಅದಕ್ಕೆ ಇದು ಸ್ಥಳವಲ್ಲ. ಹಾಗೆಂದು ತನ್ನ ಹುಟ್ಟಿದ ಸ್ಥಳಕ್ಕೆ ಹೋಗಿ ತನ್ನ ಪ್ರೀತಿಯ ಕರುಣಾಳು ತಂದೆಗೆ ಮತ್ತೆ ಮುಖ ತೋರಿಸಲು ಆಗುತ್ತಿರಲಿಲ್ಲ. ನಾಚಿಕೆಯನ್ನು ಅವಳಿಂದ ಎದುರಿಸಲಾಗಲಿಲ್ಲ.

ರಾತ್ರಿಯ ತಂಗಾಳಿ ಅವಳನ್ನು ಈಗಿನ ಸ್ಥಿತಿಗೆ ತಂದೊಡ್ಡಿತು. ದೀರ್ಘ ಕಾಲದಿಂದ ಹುದುಗಿದ್ದ ಕಣ್ಣೀರು ಅವಳ ಕೆನ್ನೆಗಳ ಮೇಲೆ ಕಣಿವೆಯಂತೆ, ಮುಳ್ಳುಪೊದೆಯ ಮೇಲೆ ಹರಿಯುವಂತೆ ಹರಿಯಿತು. ನಿಧಾನವಾಗಿ ಹರಿಯುತ್ತಿದ್ದ ಕಾಲುವೆ, ಸುತ್ತ ಇದ್ದ ಪ್ರಶಾಂತ ಮರಗಳು ಇವೆಲ್ಲವೂ ಅವಳಿಗೆ ಅನುಕಂಪ ತೋರಿಸಿತೇ ಅಥವಾ ಅವಳ ಕ್ರಿಯೆಯನ್ನು ಮೌನವಾಗಿ ಖಂಡಿಸಲು ಕೈಜೋಡಿಸಿತೇ?

ಅವಳು ಕಾಲುವೆ ಉದ್ದಕ್ಕೂ ನಡೆದಳು, ಅದರ ತಗ್ಗಿನಲ್ಲಿದ್ದ ಬಂಡೆಗಳನ್ನು ದಾಟಿ ಹೋದಳು. ಅವಳಿನ್ನೂ ಆಕ್ರೋಶದಲ್ಲಿದ್ದಳು, ಅಪಾಯಕಾರಿ ಸುತ್ತುಮುತ್ತಲಿನ ಸ್ಥಳವನ್ನು ನೋಡಲಾಗದೆ? ಇಂತಹ ಸ್ಥಳದಲ್ಲಿಯೇ ಅಲ್ಲವೇ ಸತ್ತವರನ್ನು ಎಸೆಯುವುದು? ಸತ್ತವರ ಆತ್ಮ ಗಾಳಿಯಲ್ಲೆಲ್ಲಾ ಓಡಾಡುತ್ತಾ ಮರಗಳೊಂದಿಗೆ ಬೆರೆಯುತ್ತಾ, ಅಪರಿಚಿತರು ಹಾಗೂ ದಾರಿಹೋಕರ ಮೇಲೆ ದೌರ್ಜನ್ಯ ಎಸಗುತ್ತದಾ? ಈಗ ಜಗತ್ತಿನೂಂದಿಗೆ ಅವಳ ಪತಿ, ಅಷ್ಟೇ ಏಕೆ ತನ್ನೊಂದಿಗೆ ಅವಳು ಕೋಪದಿಂದ ಇದ್ದಳು. ಯಾವಾಗಲೂ ಅವಳೇ ತಪ್ಪು ಮಾಡುತ್ತಿದ್ದಳೇ? ಆ ಮನುಷ್ಯನ ಆತ್ಮವನ್ನು ಕಸಿದುಕೊಂಡ ಸ್ವಾರ್ಥಕ್ಕೆ, ತಾನು ನೀಡುತ್ತಿದ್ದ ಬೆಲೆಯೇ? ಆದರೆ, ಅವಳು ತನ್ನದೇ ಯೌವನ ಮತ್ತು ಸೌಂದರ್ಯವನ್ನು ಅವನಿಗಾಗಿ ತ್ಯಾಗ ಮಾಡಿದ್ದಳು. ಇನ್ನೂ ಹೆಚ್ಚು ಕಣ್ಣೀರು ಹಾಗೂ ಆತಂಕ. ಓ... ಸತ್ತವರ ಆತ್ಮಗಳೇ, ನನಗಾಗಿ ಬನ್ನಿ, ನನ್ನನ್ನೇಕೆ ಈ ವೇದನೆಯಿಂದ ಬಿಡುಗಡೆ ಮಾಡಲಾರಿರಿ? ಓ ಭೂಮಿ ತಾಯಿಯೇ, ನೀನೇಕೆ ಬಾಯಿ ತೆರೆದು ನನ್ನನ್ನು ನುಂಗುವುದಿಲ್ಲ, ಎಂದು ಜೀವಂತ ಹಾಗೂ ಸತ್ತವರೆಲ್ಲರ ಆತ್ಮಗಳಿಗೆ ಬನ್ನಿ, ಮತ್ತೆ ಕಾಣಲಾರದ ಸ್ಥಳಕ್ಕೆ ತನ್ನನ್ನು ಕೊಂಡೊಯ್ಯುವಂತೆ ಅಲವತ್ತುಕೊಂಡಳು.



**ಗೂಗಿ ವಾ ಥಿಯಾಂಗ್** (ಜ: ಜ.5, 1938) ಕೀನ್ಯಾದ ಪ್ರಮುಖ ಲೇಖಕ, ಪೂರ್ವ ಆಫ್ರಿಕಾದ ಮುಂಚೂಣಿ ಕಾದಂಬರಿಕಾರ. ಕಾದಂಬರಿ, ನಾಟಕ, ಸಣ್ಣ ಕಥೆ, ಪ್ರಬಂಧಗಳು, ಸಾಹಿತ್ಯ ಮತ್ತು ಸಾಮಾಜಿಕ ವಿಮರ್ಶೆಯಿಂದ ಮಕ್ಕಳ ಸಾಹಿತ್ಯದವರೆಗೆ ಅವನ ಬರಹ ಹರಡಿದೆ. 'ಮನುಷ್ಯನ ನಿರ್ವಸಾಹತೀಕರಣ' ಕೃತಿಯಿಂದ ಗೂಗಿ ವಿಶ್ವವಿಖ್ಯಾತ. ನೈರೋಬಿಯಲ್ಲಿ ಪ್ರಾಧ್ಯಾಪಕನಾಗಿದ್ದ ಗೂಗಿ, ಅಮೆರಿಕದ ವಿಶ್ವವಿದ್ಯಾನಿಲಯಗಳಲ್ಲೂ ಪ್ರಾಧ್ಯಾಪಕನಾಗಿ ಕೆಲಸ ಮಾಡಿದ್ದಾನೆ.

ತಕ್ಷಣವೇ ಅವಳ ಪ್ರಾರ್ಥನೆಗೆ ಉತ್ತರವೋ ಎಂಬಂತೆ ದೂರದಲ್ಲಿ ಕರುಣಾಜನಕ ಆದರೂ ನಿಜ ಎಂಬಂತಹ ಶೋಕಪೂರಿತ ಧ್ವನಿ ಕೇಳಿಸಿತು. ಗಾಳಿ ವೇಗವಾಗಿ ಬೀಸಿತು. ಅವಳನ್ನು ವಿಚಿತ್ರವಾಗಿ ಸಂತೈಸಿದ್ದ ಕೊನೆಯ ನಕ್ಷತ್ರ ಅದೃಶ್ಯವಾಯಿತು. ಕಾಡಿನ ಕಗ್ಗತ್ತಲ್ಲಲ್ಲಿ ಅವಳು ಒಂಟಿಯಾದಳು! ಯಾವುದೋ ತಣ್ಣಗಿನ ಜೀವರಹಿತವಾದುದು ಅವಳನ್ನು ಮುಟ್ಟಿತು. ತಕ್ಷಣವೇ ಹೌಹಾರಿದಳು. ಹೊಡೆತವೂ ಕೂಡ ಅವಳಿಗೆ ಏನೂ ಮಾಡದ್ದನ್ನು ಮಾಡುವಂತೆ ಆಯಿತು – ಅದೇ, ಅವಳು ಕಿರುಚಿಕೊಂಡಳು. ಇಡೀ ಕಾಡು ಅವಳ ಕೂಗನ್ನು ಪ್ರತಿಧ್ವನಿಸಿತು. ನಗ್ನ ಭಯ ಅವಳನ್ನು ಆತುಕೊಂಡಿತು: ಸಿಕ್ಕಾಪಟ್ಟೆ ನಡುಗಲಾರಂಭಿಸಿದಳು. ತಾನೊಬ್ಬಳೇ ಒಂಟಿ ಅಲ್ಲ ಎಂಬುದನ್ನು ಮನವರಿಕೆ ಮಾಡಿಕೊಂಡಳು. ಅಲ್ಲಲ್ಲಿ, ಅವಳಿಗೆ ಕಾಲುವೆಯುದ್ದಕ್ಕೂ ಹೊಳೆಯುತ್ತಿದ್ದ ಸಾವಿರಾರು ಕಣ್ಣುಗಳನ್ನು ನೋಡಿದಳು, ತನ್ನನ್ನೇ ಅತ್ತಿಂದಿತ್ತ ಅನೇಕ ಅದೃಶ್ಯ ಕೈಗಳು ತಳ್ಳಿದಂತೆ ಭಾಸವಾಯಿತು. ತಾನು ಆತ್ಮಗಳ ನಾಡಿನಲ್ಲಿ ಮನೆಯಿಂದ ದೂರ, ಒಂಟಿಯಾಗಿದ್ದಂತಹ ದೃಶ್ಯ ಹಾಗೂ ತಕ್ಷಣದ ತಿಳಿವಳಿಕೆ ಅವಳನ್ನು ಚಳಿಯಲ್ಲಿ ಕೊರೆಯುವಂತೆ ಮಾಡಿತು. ಅವಳಿಗೆ ಯೋಚಿಸಲು, ಭಾವಿಸಲು ಅಥವಾ ಕೂಗಲು ಸಾಧ್ಯವಾಗಲಿಲ್ಲ. ಅದೆಲ್ಲಾ ವಿಧಿ ಮುರುಂಗುವಿನ ಸಂಕಲ್ಪ. ಅವಳ ದೇಹದಲ್ಲಿನ ಶಕ್ತಿ ಕೊನೆ ಕೊನೆಗೆ ಕ್ಷೀಣಿಸುತ್ತಿದ್ದಂತೆ ಅವಳೂ ನೆಲಕ್ಕೆ ಕುಸಿದಳು. ಅದೇ ಕೊನೆ, ಅವಳ ಕನಸು ಮತ್ತು ಮಹದಾಸೆಯ ಅಂತ್ಯ. ಆದರೆ, ಅದು ಎಷ್ಟು ವ್ಯಂಗ್ಯವಾಗಿತ್ತು. ನಿಜವಾಗಿಯೂ ಅವಳಿಗೆ ಸಾಯುವುದು ಬೇಕಿರಲಿಲ್ಲ. ಬದುಕನ್ನು ಹೊಸದಾಗಿ ಶುರು ಮಾಡಲು ಒಂದು ಅವಕಾಶಬೇಕಿತ್ತು – ಕೇವಲ ಪಡೆಯುವುದಲ್ಲ, ಕೊಡುವ ಜೀವನ. ಅವಳ ವೇದನೆ ಕೊನೆಯಾಗಿರಲಿಲ್ಲ, ನೆಲದ ಮೇಲೆ ಕುಸಿದಾಗ, ದೂರದಲ್ಲಿ ಗೂಬೆ ಮತ್ತು ನರಿ ಕೂಗಿದಾಗ, ಗಾಳಿ ಇನ್ನೂ ಹೆಚ್ಚು ಜೋರಾಗಿ ಬೀಸಿತು, ಶೋಕಪೂರ್ಣ ಧ್ವನಿ ಹೆಚ್ಚು ಗಟ್ಟಿಯಾಗಿ ಹತ್ತಿರವಾಯಿತು: ಮಳೆ ಬೀಳಲು ಆರಂಭವಾಯಿತು. ಭೂಮಿಯೇ ಸೀಳಿ ಅವಳ ಕೆಳಗೆ ಬಾಯಿ ತೆರೆದಂತಾಯಿತು.

ಆಗ ತಕ್ಷಣ, ಮಿಂಚು ಮತ್ತು ಗುಡುಗಿನ ಮೂಲಕ, ದೂರದಲ್ಲೊಂದು ಮರವನ್ನು ಗಮನಿಸಿದಳು – ಅದೊಂದು ಬೃಹತ್ ಮರ, ಕಾಂಡದ ಸುತ್ತಾ ಪೊದೆಗಳೆಲ್ಲಾ ಬಾಗಿರುವಂತೆ. ಅವಳಿಗೆ ಗೊತ್ತಾಯಿತು: ಗೊತ್ತಾಯಿತು ಇದೇ ಮರ – ಪವಿತ್ರವಾದ ಮುಗುಮೊ – ಎಲ್ಲವನ್ನೂ ಕಾಣಬಲ್ಲ ಮುರುಂಗುವಿನ ಬಲಿಪೀಠ. ಅವಳು ಆಲೋಚಿಸಿದಳು, 'ಕೊನೆಗೂ ಇಲ್ಲಿದೆ ವಿರಾಮಧಾಮ.'